O.S. No.245/18 P.W. 1 Dated :17-08-2022.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ. ಟಿ.ಎನ್ . ವಕೀಲರಿಂದಃ

1) ವಾದಿಗೆ ಎಷ್ಟು ವರ್ಷ ಎಂದು ನನಗೆ ಗೊತ್ತಿಲ್ಲ. ನನಗೆ 69 ವರ್ಷ. ವಾದಿ ಆರೋಗ್ಯವಾಗಿದ್ದಾನೆಂದರೆ ಸರಿ . ವಾದಿ ನ್ಯಾಯಾಲಯಕ್ಕೆ ಹತ್ತಿರದಲ್ಲಿ ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ವಾದಿಗೆ ಈ ಪ್ರಕರಣ ಹೂಡಲು ಇಷ್ಟವಿಲ್ಲದಿದ್ದರೂ ನಾನು ಒತ್ತಾಯ ಮಾಡಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಬರುವಾಗ ವಾದಿ ಮತ್ತು ಲಕ್ಷ್ಮಮ್ಮ ಮತ್ತು ಪಾರ್ವತಮ್ಮರವರನ್ನು ಕಾರಿನಲ್ಲಿ ಕೂರಿಸಿಕೊಂಡೇ ಬರುತ್ತೇನೆಂದರೆ ಸರಿಯಲ್ಲ. ವಾದಿ ನಿಜಸಂಗತಿ ಹೇಳಬಹುದೆಂದು ಅವರಿಂದ ಅಧಿಕಾರ ಪತ್ರ ಪಡೆದು , ನಾನು ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ವಾದಿ ಆರೋಗ್ಯವಾಗಿದ್ದಾರೆಂದರೆ ಸರಿಯಲ್ಲ. ವಾದಿ ಮನೆಯಲ್ಲಿಯೇ ಇರುತ್ತಾರೆ. ವಾದಿ ನನ್ನ ಬಳಿ ಬಂದಿಲ್ಲ , ನಾನೇ ಕೇಳಿಕೊಂಡು ಜಿ ಪಿ ಎ ಪಡೆದು ಈ ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ಹಾಗೆಯೇ ಪಾರ್ವತಮ್ಮ ಲಕ್ಷ್ಮಮ್ಮನವರಿಂದಲೂ ಸಹ ಜಿ ಪಿ ಎ ಪಡೆದು ದಾವೆ ಹೂಡಿದ್ದೇನೆಂದರೆ ಸರಿಯಲ್ಲ.

2) ನಮಗೂ ಪ್ರತಿವಾದಿಯರಿಗೂ ನನ್ನ ತಂದೆ ಕಾಲದಿಂದಲೂ ದ್ವೇಷ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಸ್ವತ್ತನ್ನು ಕಬಳಿಸಿರುವ ಕಾರಣ ದಾವೆ ಹೂಡಿದ್ದೇನೆ ಎನ್ನುತ್ತಾರೆ. ಸ.ನಂ. 14 ಚೀಕನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಕೃಷ್ಣೇಗೌಡರವರ ಮೇಲೆ ದಾವೆ ಹೂಡಿದ್ದರು ಎಂದರೆ ಸರಿ. ಅವರ ವಿರುದ್ಧ ತಹಸೀಲ್ದಾರ್ ರವರ ನ್ಯಾಯಲಯದಲ್ಲೂ ಸಹ ಅರ್ಜಿ ಹಾಕಿದ್ದೆ ಎಂದರೆ ಸಾಕ್ಷಿಯು ಖಾತೆ ಮಾಡಿದ್ದು ತಪ್ಪೆಂದು ಹಾಕಿದ್ದೆ ಎನ್ನುತ್ತಾರೆ. ಆ ಆದೇಶದ ವಿರುದ್ಧ ಸಕಲೇಶಪುರ ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದೆ ಎಂದರೆ ಸರಿ. ಅವರ ಆದೇಶದ ವಿರುದ್ಧ ಜಿಲ್ಲಾಧಿಕಾರಿಯವರ ನ್ಯಾಯಾಲಯಕ್ಕೂ ಅಪೀಲು ಹೂಡಿದ್ದೆ ಎಂದರೆ ಸರಿ . ಅ.ದಾ. 439/87 ರಂತೆ ನನ್ನ ತಂದೆಯವರು ಹಾಸನದ ನ್ಯಾಯಾಲಯದಲ್ಲಿ ಕೃಷ್ಣೇಗೌಡರ ವಿರುದ್ಧ ದಾವೆ ಹೂಡಿದ್ದರು. ಆನಂತರ ಸದರಿ ದಾವೆಯು ಆಲೂರು ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ದಾವಾ ಸಂ. 7/99 ರಂತೆ ದಾಖಲಾಯಿತು. ಆ ದಾವೆ ವಜಾ ಆಯಿತು ಎಂದರೆ ಸಾಕ್ಷಿಯು ನನ್ನ ತಂದೆ ಅವಿದ್ಯಾವಂತರಾಗಿದ್ದು ನ್ಯಾಯಾಲಯಕ್ಕೆ ಸರಿಯಾದ ದಾಖಲೆ ಕೊಡದ ಕಾರಣ ವಜಾ ಆಗಿದೆ ಎನ್ನುತ್ತಾರೆ.

3) ನನ್ನ ತಂದೆ ತೀರಿಕೊಂಡ ನಂತರ ಅ .ದಾ. ನಂ. 7/99 ರಲ್ಲಿ ನಾನು ಪಕ್ಷಗಾರನಾಗಿದ್ದೆ ಎಂದರೆ ಸರಿ . ಅದರಲ್ಲಿ ನಾನೇ ಸಾಕ್ಷಿ ನುಡಿದಿದ್ದೇನೆಂದರೆ ಸರಿ . ದಾಖಲೆಗಳನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ ನನ್ನ

ತಂದೆಯವರು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ದಾವೆ ವಜಾ ಆದಾಗ ಹಾಸನದ ಜಿಲ್ಲಾ ನ್ಯಾಯಾಲಯಕ್ಕೆ ಆರ್ ಎ . 402/2005 ರಂತೆ ಅಪೀಲು ಹೂಡಿದ್ದೆ ಎಂದರೆ ಸರಿ . ಅದು ದಿಃ07-04-2011 ರಲ್ಲಿ ವಜಾ ಆಯಿತು ಎಂದರೆ ದಾಖಲೆ ಸರಿಯಿಲ್ಲದ ಕಾರಣ ವಜಾ ಆಯಿತು ಎನ್ನುತ್ತಾರೆ. ಆ ಆದೇಶದ ವಿರುದ್ಧ ನಾನು ಉಚ್ಚ ನ್ಯಾಯಾಲಯಕ್ಕೆ ಆರ್ ಎಸ್ ಎ ನಂಃ 1984/2011 ರಂತೆ ಅಪೀಲು ಹೂಡಿದ್ದೆ ಎಂದರೆ ಸರಿ . ಅದು ದಿಃ04-12-2012 ರಂದು ವಜಾ ಆಯಿತು ಎಂದರೆ ದಾಖಲೆಗಳು ಸರಿ ಇಲ್ಲದ ಕಾರಣ ವಜಾ ಆಯಿತು ಎನ್ನುತ್ತಾರೆ. ಆ ತೀರ್ಪಿನ ವಿರುದ್ಧ ನಾನು ಮೇಲ್ಮನವಿ ಮಾಡಿಲ್ಲ ಎಂದರೆ ಸರಿ . ಆ ತೀರ್ಪಿನ ವಿರುದ್ಧ ನಾವು ಅಪೀಲು ಸಲ್ಲಿಸಿರುವುದಿಲ್ಲ.

4) ನಮ್ಮದು ಪಟೇಲ್ ಪುಟ್ಟೇಗೌಡರವರ ವಂಶ ಎಂದರೆ ಸರಿಯಲ್ಲ. ನಮ್ಮ ತಂದೆ ಪಟೇಲಿಕೆ ಇನಾಂ ತೆಗೆದುಕೊಳ್ಳುತ್ತಿದ್ದರೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅ.ದಾ. 133/17 ರಂತೆ ವಿಭಾಗ ಕೋರಿ ನನ್ನ ಮಗ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನ್ನ ಮಗನಿಗೆ ಸೇರಿದ್ದು ಎನ್ನುತ್ತಾರೆ. . ಆ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅದು ವಜಾ ಆಗಿ ರೆಸ್ಟೋರೇಶನ್ ಗೆ ಅರ್ಜಿ ಹಾಕಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಅದೇ ಆಸ್ತಿಯ ಮೇಲೆ ಅ.ದಾ. 330/2018 ರಂತೆ ದಾವೆ ಹೂಡಿದ್ದೇನೆ ಎಂದರೆ ಅದು ನನ್ನ ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ಅ.ದಾ. 7/99 ರಲ್ಲಿ ಕೇಳಿದ ಪರಿಹಾರವನ್ನೇ ಈ ದಾವೆಗಳಲ್ಲೂ ಕೇಳಿದ್ದೇನೆಂದರೆ ಸರಿಯಲ್ಲ. ಅ.ದಾ. 330/18 ರಲ್ಲಿ ವಂಶವೃಕ್ಷದ ಆಧಾರದ ಮೇಲೆ ಸದರಿ ದಾವೆಯನ್ನು ಹೂಡಿದ್ದೆನು. ಕೃಷ್ಣೇಗೌಡರಿಗೆ ತೊಂದರೆ ಕೊಡುವ ಉದ್ದೇಶದಿಂದ 40 ವರ್ಷಗಳಿಂದ ದಾವೆ ಹೂಡುತ್ತಿದ್ದೇನೆಂದರೆ ಕೃಷ್ಣೇಗೌಡ ನನ್ನ ವಂಶಸ್ಥರಲ್ಲದಿದ್ದರೂ ಸಹ ನಮ್ಮ ಆಸ್ತಿಗಳನ್ನು ಅವರು ಮಾಡಿಕೊಂಡಿರುವ ಕಾರಣ ನ್ಯಾಯಕ್ಕಾಗಿ ದಾವೆ ಹೂಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆಸ್ತಿಗಳು ಕೃಷ್ಣೇಗೌಡರಿಗೆ ಸೇರಿದ್ದೆಂದು ತೀರ್ಪಾಗಿದೆ ಎಂದರೆ ಅದು ಸರಿ ಇಲ್ಲ ಎಂದು ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುತ್ತಾರೆ.

5) ವಾದಿಗೆ ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ ಪುನರ್ವಸತಿಗಾಗಿ ಮಂಜೂರಾದ ಆಸ್ತಿ ದಾವಾಸ್ತಿಯಾಗಿದೆ.ವಳಗೇರಹಳ್ಳಿಯಲ್ಲಿ ಮುಳುಗಡೆಯಾದ ಜಮೀನಿಗೆ ದಾವಾಸ್ತಿ ಮಂಜೂರಾಗಿದೆ. ಸದರಿ ಸ್ವತ್ತು 1978-79 ರಲ್ಲಿ ಸೋಮೇಗೌಡರಿಗೆ ಮಂಜೂರಾಗಿತ್ತು ಎಂದರೆ ಸರಿ . ಮಂಜೂರಾದ ನಂತರ ಸೋಮೇಗೌಡ ಸ್ವತ್ತಿನ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ . ಚೀಕನಹಳ್ಳಿ ಗ್ರಾಮದ ಸ.ನಂ.6 , ಸ.ನಂ. 14, ವಳಗೇರಹಳ್ಳಿ ಗ್ರಾಮದ ಸ.ನಂ. 14, ರ ಜಮೀನು ಅಕ್ಕಪಕ್ಕದ ಜಮೀನುಗಳು ಎಂದರೆ ಸಾಕ್ಷಿಯು ಬೇರೆ ಬೇರೆ ಗ್ರಾಮಗಳಿಗೆ ಸೇರಿದವುಗಳಾಗಿರುತ್ತವೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸುತ್ತಲೂ ಕೃಷ್ಣೇಗೌಡರಿಗೆ ಸೇರಿದ ಸ್ವತ್ತು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಸ.ನಂ.78, 79 ರ ಸ್ವತ್ತುಗಳು ಇವೆ ಎಂದರೆ ಸರಿ . ದಿಃ14-05-1993

ರಂದು ಕೃಷ್ಣೇಗೌಡರು ಸ.ನಂ.80 ರ ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅ .ದಾ ನಂ 93/11 ರಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಕರಾರು ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ನಾನು ಈ ವಿಷಯವನ್ನು ತಿಳಿಸಿದ್ದ ಎಂದರೆ ಸರಿಯಲ್ಲ. ದಿಃ14-05-1993 ರಂದು ಸ.ನಂ.78 ರ ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡರು ಎಂದರೆ ಸಾಕ್ಷಿಯು ಅದನ್ನೂ ಸಹ ಅ ದಾ ನಂ 93/11 ರಲ್ಲಿ ತಿಳಿಸಿರುತ್ತೇನೆಂದು ನುಡಿಯುತ್ತಾರೆ. ಸ.ನಂ. 78 , 80 ರ ಮಧ್ಯೆ ಸ.ನಂ. 79 ರ ಜಮೀನಿದೆ ಎಂದರೆ ಸರಿ . ಸ.ನಂ. 79 ರ ಸ್ವತ್ತನ್ನು ಬಿಂದಮ್ಮ ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನೂ ಸಹ ಅ ದಾ ನಂ 93/11 ರಲ್ಲಿ ತಿಳಿಸಿರುತ್ತೇನೆಂದು ನುಡಿಯುತ್ತಾರೆ. ಸ.ನಂ.78 , 79 ರ ಸ್ವಾಧೀನಾನುಭವವನ್ನು ಪಡೆದುಕೊಂಡ ನಂತರ 2 ನೇ ಪ್ರತಿವಾದಿ ಖಾತೆ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೃಷ್ಣೇಗೌಡರು ತಹಸೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ ನಂತರ ಸ್ಥಳ ಪರಿಶೀಲನೆ ಮಾಡಿ ಅವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿರುತ್ತಾರೆಂದರೆ ಸಾಕ್ಷಿಯು ಪೋರ್ಜರಿ ದಾಖಲೆಗಳ ಮುಖಾಂತರ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸ.ನಂ. 78 ಮತ್ತು ಸ.ನಂ.80 ರ ಎರಡು ಸ್ವತ್ತುಗಳಿಗೂ ಒಂದೇ ಎಂ ಆರ್ ಆದೇಶವಾಗಿರುತ್ತದೆ ಎಂದರೆ ಸರಿ . ಕೃಷ್ಣೇಗೌಡರು ದಾವಾ ಸ್ವತ್ತಿನ ಸ್ವಾಧೀನ ಪಡೆದುಕೊಂಡದ್ದು , ಹಾಗೂ ಕೃಷ್ಣೇಗೌಡರು ಖಾತೆ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ ವಿಷಯ ವಾದಿಗೆ ಖುದ್ದು ತಿಳಿದಿತ್ತು ಎಂದರೆ ಸರಿಯಲ್ಲ. ಕೃಷ್ಣೇಗೌಡರು ದಾವಾ ಸ್ವತ್ತಿನಲ್ಲಿ ಸ್ವಾಧೀನವಿರುವ ವಿಷಯ ಲಕ್ಷ್ಮಮ್ಮನವರಿಗೆ ಹಾಗೂ ಸಾರ್ವಜನಿಕರಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ಕೃಷ್ಣೇಗೌಡರ ಹೆಸರಿಗೆ ದಾವಾ ಸ್ವತ್ತು ವರ್ಗಾವಣೆಯಾಗಿರುವ 2015 ರವರೆಗೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವರ್ಷ ಕೃಷ್ಣೇಗೌಡರು ದಾವಾ ಸ್ವತ್ತಿನ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ಕೃಷ್ಣೇಗೌಡರು ದಾವಾ ಸ್ವತ್ತನ್ನು ಅಭಿವೃದ್ಧಿಗೊಳಿಸಿರುತ್ತಾರೆಂದರೆ ಸರಿಯಲ್ಲ. ಸ.ನಂ.78, 79, 80 ರಲ್ಲಿ ಒಟ್ಟು 12 ಎಕರೆ ಜಮೀನಿನಲ್ಲಿ ಕೃಷ್ಣೇಗೌಡರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಹೆಬ್ಬೇವು , ತೇಗದ ಮರಗಳು , ಸಿಲ್ವರ್ ಮರಗಳನ್ನು 2 ನೇ ಪ್ರತಿವಾದಿ ಬೆಳೆದಿರುತ್ತಾರೆಂದರೆ ಸರಿಯಲ್ಲ. ತೆರೆದ ಬಾವಿಯನ್ನು , ಕೃಷಿ ಹೊಂಡ ಮಾಡಿರುತ್ತಾರೆಂದರೆ ಸರಿಯಲ್ಲ . ದಾವಾ ಸ್ವತ್ತನ್ನು ಅಭಿವೃದ್ಧಿಪಡಿಸಲು 2 ನೇ ಪ್ರತಿವಾದಿ ಕೃಷ್ಣೇಗೌಡರು ಪಿ ಎಲ್ ಡಿ ಬ್ಯಾಂಕ್ ಇತರೆ ಬ್ಯಾಂಕುಗಳಿಂದ ಸಾಲ ಪಡೆದಿರುತ್ತಾರೆಂದರೆ ಸರಿಯಲ್ಲ. ಆನೆ ದಾಳಿಯ ಪರಿಹಾರವನ್ನು ಸಹ ಪಡೆದಿರುತ್ತಾರೆಂದರೆ ಸರಿಯಲ್ಲ.

6) 2 ನೇ ಪ್ರತಿವಾದಿ ತಮಗೆ ವಯಸ್ಸಾಗಿರುವ ಕಾರಣ ತಮ್ಮ ಎಲ್ಲಾ ಸ್ವತ್ತುಗಳನ್ನು 1 ನೇ ಪ್ರತಿವಾದಿ ಹೆಸರಿಗೆ ದಾನಪತ್ರದ ಮೂಲಕ ವರ್ಗಾಯಿಸಿರುತ್ತಾರೆಂದರೆ ಸಾಕ್ಷಿ ವಿವಾದಿತ ಸ್ವತ್ತುಗಳನ್ನು ಮಾತ್ರ ವರ್ಗಾಯಿಸಿದ್ದು, ಸ್ವಯಾರ್ಜಿತ ಸ್ವತ್ತುಗಳನ್ನು ವರ್ಗಾಯಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ವಿಲ್ ಬರೆದುಕೊಟ್ಟ ನಂತರ ಸದರಿ ದಾವೆ

ಹೂಡಿರುತ್ತೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಪ್ರತಿವಾದಿಗಳಿಗೆ ಪ್ರತಿಕೂಲ ಸ್ವಾಧೀನಾನುಭವದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.